ಷರತ್ತಿಗೊಳಪಡಿಸಿ ಮಂಜೂರು ಮಾಡಲು ಸರ್ಕಾರವು ಆದೇಶ ಸಂಖ್ಯೆ : ಆರ್‌ಡಿ 99 ಎಲ್‌ಜೆಎಂ 86 ದಿನಾಂಕ 16-09-1994 ರಲ್ಲಿ ಅನುಮೋದನೆ ನೀಡಿರುವುದರಿಂದ, ಅದನ್ನು ಅನುಸರಿಸಿ ಮಂಜೂರು ಮಾಡಿ ಸಾಗುವಳಿ ಚೀಟಿ ನೀಡಲಾಗಿರುತ್ತದೆ.

ಹುಣಸೂರು ತಾಲ್ಲೂಕು ಉದ್ದೂರು ಕಾವಲ್ ಮತ್ತು ಆಸ್ಪತ್ರೆ ಕಾವಲ್ ಗ್ರಾಮದ 825 ಜನರು ಸಣ್ಣ ಹಿಡುವಳಿದಾರರಾಗಿದ್ದು, ಈ ಹಿಂದೆ ದೊಡ್ಡ ಹಿಡುವಳಿದಾರರೆಂದು ಗುರುತಿಸಿದವರ ಪೈಕಿ ಪುನರ್ ಪರಿಶೀಲನೆಯಂತೆ ವಿಭಾಗಗೊಂಡು 6 ಜನ ಹೆಚ್ಚುಗೊಂಡು ಸಣ್ಣ ಹಿಡುವಳಿದಾರರಾಗಿರುವವರನ್ನು ಸೇರಿಸಿ ಪ್ರಸ್ತುತ 831 ಜನರಿಗೆ ಒಟ್ಟು 1374-31 ಎಕರೆ ಜಮೀನಿಗೆ ಮಂಜೂರಾತಿ ಪ್ರಸ್ತಾಪಿಸಲಾಗಿರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

(ಋ) ವಿಷಯ:-<u>ಬೋಧಕ ಹಾಗೂ ಬೋಧಕೇತರ ವೈದ್ಯರು ಗಳ ವೈದ್ಯರುಗಳ ವೇತನದಲ್ಲಿ ತಾರತಮ್ಯ ಮಾಡಿರುವುದರ ಕುರಿತು.</u>

ಡಾ॥ ಎ.ಬಿ. ಮಲಕರೆಡ್ಡಿ (ಡಾ॥ ಹೆಚ್.ಸಿ. ಮಹದೇವಪ್ಪ ಪರವಾಗಿ) :- ಮಾನ್ಯ ಅಧ್ಯಕ್ಷರೆ, ಬೋಧಕ ಮತ್ತು ಬೋಧಕೇತರ ವೈದ್ಯರುಗಳ ವೇತನದಲ್ಲಿ ತಾರತಮ್ಯ ಮಾಡಿರುವುದರ ಕುರಿತು ನಿಯಮ 73 ರಡಿಯಲ್ಲಿ ಪ್ರಸ್ತಾಪಿಸಿರುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಬೋಧಕ ವೈದ್ಯರು ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಹಾಗೂ ಬೋಧಕೇತರ ವೈದ್ಯರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುತ್ತಾರೆ. ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವೃಂದದ ಪ್ರಾಧ್ಯಾಪಕರುಗಳು / ಉಪನ್ಯಾಸಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳಿಗಿಂತ ಹೆಚ್ಚಿನ ವೇತನ ಪಡೆಯುತ್ತಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣವೇನೆಂದರೆ ಬೋಧಕ ವರ್ಗಕ್ಕೆ ವೃಂದದ ಸೇರಿದವರಿಗೆ ಇತರೆ ವಿಶೇಷ ಭತ್ಯೆಗಳನ್ನು ಸೇರಿಸಿರುವುದರಿಂದ ಪ್ರತಿ ಬೋಧಕ ವೃಂದದ ಒಟ್ಟು ವೇತನದಲ್ಲಿ ಹೆಚ್ಚಿಗೆ ವೇತನ ನೀಡದಂತಾಗಿದೆ. ಬೋಧಕ ಮತ್ತು ಬೋಧಕೇತರ ವೈದ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳು ಬೇರೆ ಬೇರೆಯಾಗಿ ರುತ್ತದೆ. ಹೀಗಾಗಿ ಬೋಧಕ ಮತ್ತು ಬೋಧಕೇತರ ವೇತನದಲ್ಲಿ ತಾರತಮ್ಯ ಇರುತ್ತದೆ. ಈ ವ್ಯತ್ಯಾಸವನ್ನು ಹೋಗಲಾಡಿಸಿ ಬೋಧಕ ಸಿಬ್ಬಂದಿಗೆ ಸರಿಸಮವಾದ ವೇತನ

ಮತ್ತು ಭತ್ಯೆಗಳನ್ನು ಬೋಧಕೇತರ ಸಿಬ್ಬಂದಿಗೂ ನೀಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಮನವಿ ಸಲ್ಲಿಸಿದೆ. ಈ ಬೇಡಿಕೆಯನ್ನು ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ದಿನಾಂಕ 22-1-2006 ರಂದು ರಚಿಸಲಾಗಿದೆ. ಸದರಿ ಸಮಿತಯು ನೀಡುವ ವರದಿಯನ್ನು ಆಧರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಡಾ॥ ಎ.ಬಿ. ಮಲಕರರೆಡ್ಡಿ:- ಮಾನ್ಯ ಅಧ್ಯಕ್ಷರೆ, It is a classic case of leaping before thinking ಮೆಡಿಕಲ್ ಕಾಲೇಜ್ ಸಿಬ್ಬಂದಿಗಳಿಗೆ ಇಷ್ಟು astronomical pay ಹೆಚ್ಚಿಗೆ ಮಾಡಿದ್ದಾರೆ. There are well laid down principles ಸಮ ಪದವಿ, ಸಮ ಅನುಭವ. ಯಾವುದೇ ಒಂದು ಪೇ ಫಿಕ್ಸ್ ಮಾಡಬೇಕಾದರೆ There are sound principles, ಸಮ ಪದವಿ, ಸಮ ಅನುಭವ ಮತ್ತು ಸಮ ಹುದ್ದೆ. ಇಲ್ಲಿ ಈಗ ನಿಮ್ಮದು basic entry of service ಒಬ್ಬರು ಎಂ.ಬಿ.ಬಿ.ಎಸ್. ಪಾಸ್ ಮಾಡಿದ ಮೇಲೆ ಸಾಮಾನ್ಯ ಕರ್ತವ್ಯಾಧಿಕಾರಿಯಾಗಿ ಸೇರುತ್ತಾರೆ. ಟೀಚಿಂಗ್‌ಗೆ ಹೋಗುವವರು ಟ್ಯೂಟರ್ ಆಗಿ ಸೇರುತ್ತಾರೆ. ಒಬ್ಬರಿಗೆ ನೀವು ಕೊಡುತ್ತಿದ್ದೀರಿ 18 ಸಾವಿರ ರೂ.ಗಳು, ಅದೇ ಕಾಲೇಜ್ ಸೇರಿದವರಿಗೆ 32 ಸಾವಿರ ರೂ.ಗಳ ಸಂಬಳ. difference of Rs. 14,000 ಇಷ್ಟು astronomical pay ಹೆಚ್ಚಿಗೆಯನ್ನು ಯಾವ ಕಾರಣದಿಂದ ಮಾಡಿದಿರಿ? Does it not give rise to heart burning? ಇದು ಯಾವ ಪ್ರಿನ್ಸಿಪಲ್‌ನೊಳಗೊಂಡಿದೆ. ಒಂದೇ ಪದವಿ, ಒಂದೇ ಅನುಭವ. ಇಲ್ಲೇನಪ್ಪಾ ಎಂದರೆ ಒಬ್ಬರು ವೈದ್ಯಕೀಯ ವೃತ್ತಿಯನ್ನು ಸೇರುತ್ತಾರೆ, ಒಬ್ಬರು ಕಾಲೇಜಿಗೆ ಹೋಗುತ್ತಾರಷ್ಟೆ. ಇಲ್ಲಿ ಕಾಲೇಜಿಗೆ ಹೋಗುವವರು ವಿಶೇಷ ಅನುಭವವನ್ನೇನೂ ಹೊಂದಿರುವುದಿಲ್ಲ. ವಿಶೇಷ ಟ್ರೈನಿಂಗ್ ಏನೂ ಹೊಂದಿರುವುದಿಲ್ಲ. ನಾನು ಇದರ ವಿಷಯವಾಗಿ ಆಗಿನ ಮೆಡಿಕಲ್ ಎಡುಕೇಶನ್ ಮಿನಿಸ್ಟರ್ ಆಗಿದ್ದ ಡಾ: ವಿ.ಎಸ್. ಆಚಾರ್ಯರವರ ಜೊತೆ ಮಾತನಾಡಿದೆ. ನಾನು ಹೆಲ್ತ್ ಮಿನಿಸ್ಟರ್ ಆಗಿದ್ದಾಗ, ವೈದ್ಯಕೀಯ ಶಿಕ್ಷಣ ಸಚಿವನಾಗಿದ್ದಾಗ, 55 ಪ್ರೊಫೆಸರ್‌ಗಳ ಡಿಫಿಸಿಟ್ ಆಗಲೇ ಇತ್ತು. Immediately next year ನೀವು 6 ಹೊಸ ಕಾಲೇಜ್‌ಗಳನ್ನು ಮಾಡಿದಿರಿ. ಎಲ್ಲಿಂದ ನೀವು ಶಿಕ್ಷಕರನ್ನು ತರುತ್ತೀರಿ? ಗೊತ್ತಿದ್ದು, ಗೊತ್ತಿದ್ದೂ ಆಗ ನೀವು ಪೇ ಹೆಚ್ಚಿಗೆ ಏಕೆ ಮಾಡಿದಿರಿ, ಇಲ್ಲಿಗೆ

ಬರತಕ್ಕಂಥ ಬೋಧಕರು ಯಾರೂ ಸಿಗಲಿಲ್ಲ ಅದಕ್ಕೆ ನಾವು ಹೆಚ್ಚಿಗೆ ಸ್ಯಾಲರಿಯನ್ನು ಮಾಡಿದೆವು to attract the applications. ಈಗ ಎಷ್ಟು ಹೆಲ್ತ್ ಸೆಂಟರ್‌ನಲ್ಲಿ ಕ್ವಾಲಿಫೈಡ್ ಡಾಕ್ಟರ್‌ಗಳು ಇದ್ದಾರೆ ಹೇಳಿ ನೋಡೋಣ. ಅನೇಕ ಕಡೆ ಕ್ವಾಲಿಫೈಡ್ ಡಾಕ್ಟರ್‌ಗಳು ಇಲ್ಲದೇ ಇರುವುದಕ್ಕೆ ಈಗ ನೀವು ಆಯುರ್ವೇದಿಕ್ ಡಾಕ್ಟರ್ ಗಳನ್ನು ಪೋಸ್ಟ್ ಮಾಡಿದ್ದೀರಿ. ಹೋಮಿಯೋಪತಿ ಡಾಕ್ಟರ್‌ಗಳನ್ನು ಪೋಸ್ಟ್ ಮಾಡಿದ್ದೀರಿ. ಹುಬ್ಬಳ್ಳಿ, ಗುಲ್ಬರ್ಗಾ ಜನರಲ್ ಆಸ್ಪತ್ರೆಗೆ ತಜ್ಞ ಡಾಕ್ಟರ್‌ಗಳ ಕೊರತೆ 40 % ಇದೆ. ಹೀಗಿರುವಾಗ ನೀವು ಅವರಿಗೂ ಕೂಡ ಸ್ಯಾಲರಿ ಹೆಚ್ಚಿಗೆ ಮಾಡಿ. ನೀವು ಹೇಗೆ ಟೀಚ್ ಮಾಡುವುದಕ್ಕೆ ಡಾಕ್ಟರ್ ಸಿಗುವುದಿಲ್ಲವೆಂದು ಹೇಳಿ ಸ್ಯಾಲರಿಯನ್ನು ಹೆಚ್ಚಿಗೆ ಮಾಡಿದಿರಲ್ಲಾ ಅದೇ ರೀತಿ ಈ ಡಾಕ್ಟರ್‌ಗಳಿಗೂ ಸ್ಯಾಲರಿಯನ್ನು ಹೆಚ್ಚಿಗೆ ಮಾಡಿ. ಇವೊತ್ತು ಹಳ್ಳಿಗಳಿಗೆ ಡಾಕ್ಟರ್ ಹೋಗುವುದಿಲ್ಲವೆಂದು ಎಲ್ಲ ಕಡೆಯಲ್ಲಿಯೂ ಕೂಗಿದೆ. ಈಗ ನೀವು ಅವರಿಗೂ ಸ್ಯಾಲರಿಯನ್ನು ಹೆಚ್ಚಿಗೆ ಮಾಡಿದರೆ ಅವರೂ ಕೂಡ ಹಳ್ಳಿಗಳಿಗೆ ಹೋಗುತ್ತಾರೆ. this is very wrond, I do not know how they function in the Government. Is it a way to increase the salary? It is totally sky rocketing. ಇದನ್ನು ಯಾವ ರೀತಿ ಮಾಡಿದಿರಿ? ನೀವೇನೋ ಒಂದು ಕಮಿಟಿ ಮಾಡಿದಿರಿ. ಅಸೆಂಬ್ಲಿಯಲ್ಲಿ ಉತ್ತರ ಕೊಡುವುದಕ್ಕೆ ಕಮಿಟಿ ಮಾಡುತ್ತಾರೆ. ಆಮೇಲೆ ಕಮಿಟಿ ಮೆಂಬರ್ ಮಾಡುತ್ತಾರೆ. ಅದು ಹಾಗೆಯೇ ಹೋಗುತ್ತದೆ. ಈಗ ಸರ್ಕಾರದಲ್ಲಿ proform of promotion ಕೊಟ್ಟಿದ್ದೀರಿ. ನೀವು ಹೊಸ ಕಾಲೇಜ್‌ಗಳು ಪ್ರಾರಂಭವಾದ ಮೇಲೆ to attract the candidates, you have raised the salary. ಅವರಿಗೆ ಈಗ ನೀವು 60 ಸಾವಿರ, 70 ಸಾವಿರ ಸ್ಯಾಲರಿಯನ್ನು ಕೊಡುತ್ತಿದ್ದೀರಿ. ಈಗ Government Medical College ನಲ್ಲಿ ಕೆಲಸ ಮಾಡುವಂಥವರಿಗೆ ನೀವು ಏನು ಮಾಡಿದಿರಿ? ಅವರಿಗೂ ಪ್ರಮೋಶನ್ ಕೊಟ್ಟಿರಿ, ಏನು proform of promotion. ಅವರಿಗೆ ನೀವು ಈ ರೀತಿ ಸ್ಯಾಲರಿ ಕೊಟ್ಟಿಲ್ಲ. full promotion ಕೊಡುವುದು ಕಾಗದದ ಮೇಲೆ. It is tatally chaos in the functioning of the department.

ಅಧ್ಯಕ್ಷರು :- ಅದಕ್ಕೆ ಏನು ಮಾಡಬೇಕೆಂದು ಸಲಹೆ ಕೊಡಿ.

ಡಾ|| ಎ.ಬಿ. ಮಲಕರೆಡ್ಡಿ :- ಮಾನ್ಯ ಸಚಿವರು ಮೊದಲು ಉತ್ತರ ಕೊಟ್ಟು ಅವರು ಸಲಹೆ ಕೇಳಲಿ. ಆಮೇಲೆ ನಾನು ಸಲಹೆ ಕೊಡುತ್ತೇನೆ.

ಶ್ರೀ ಬಿ. ಶ್ರೀರಾಮುಲು :- ಮಾನ್ಯ ಅಧ್ಯಕ್ಷರೆ, ಇದರ ಪರವಾಗಿ ನಾವು ಮತ್ತು ಬಹಳಷ್ಟು ಮಂದಿ ತಜ್ಞರುಗಳು ಸೇರಿಕೊಂಡು ಚರ್ಚೆಯನ್ನೂ ಕೂಡ ಈಗಾಗಲೇ ಮಾಡಿದ್ದೇವೆ. ಏಕೆಂದರೆ ಈಗಾಗಲೇ ನಮ್ಮ ರಾಜ್ಯದಲ್ಲಿ ಬಹಳಷ್ಟು ವೈದ್ಯರ ಕೊರತೆ ಇದೆ. ವೈದ್ಯರುಗಳ ಕೊರತೆ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಕುಳಿತು ಚರ್ಚೆ ಮಾಡಿದಂಥ ಸಂದರ್ಭದಲ್ಲಿ 815 ಮಂದಿ ವೈದ್ಯರನ್ನು ಕೊಟ್ಟರು. ವೈದ್ಯರನ್ನು ಕೊಟ್ಟ ನಂತರವೂ ಕೂಡ ಬಹಳಷ್ಟು ಮಂದಿ ವೈದ್ಯರು ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಬೇಕಾದರೆ ಬಹಳಷ್ಟು ಕಷ್ಟ ಆಗುತ್ತದೆ ಎನ್ನುವಂಥ ಹಿತದೃಷ್ಟಿಯಿಂದ ನಾವು ಒಂದು clause ಹಾಕಿದೆವು.

ವೈದ್ಯರನ್ನು ಕೊಟ್ಟರೂ ಕೂಡ ಬಹಳಷ್ಟು ಮಂದಿ ವೈದ್ಯರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕಾದರೆ ಬಹಳಷ್ಟು ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಒಂದು clause ಹಾಕಿದ್ದೆವು. ಅದು ಏನೆಂದರೆ ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ತಾವು ಸೇವೆ ಸಲ್ಲಿಸಬೇಕು. ಒಂದು ವರ್ಷದವರೆಗೂ ಎಂತಹ recommendation ಬಂದರೂ ಹೊರಗಡೆ ಕಳುಹಿಸುವುದಿಲ್ಲವೆನ್ನುವ clause ಹಾಕಿದ್ದೆವು. ಅದರ ಜೊತೆಗೆ ವೇತನ ತಾರತಮ್ಯದ ಬಗ್ಗೆ ತಾವು ಏನು ಪ್ರಸ್ತಾಪ ಮಾಡುತ್ತಿದ್ದೀರಿ, ಅದರ ಬಗ್ಗೆ ನಮ್ಮ Additional Chief Secretary ಅವರ ಅಧ್ಯಕ್ಷತೆಯಲ್ಲಿ ಒಂದು committee ಮಾಡಿದೆವು. ಆ ಕಮಿಟಿಯಲ್ಲಿ ವೈದ್ಯರಿಗೆ ಎಷ್ಟು ವೇತನ ಕೊಡಬೇಕು, ಜೊತೆಗೆ ಅವರಿಗೆ ಏನೇನು facilities ಕೊಡಬೇಕು, ಇವತ್ತು MBBS doctor private hospitalಗಳಲ್ಲಿ 60 ರಿಂದ 70 ಸಾವಿರ ರೂಪಾಯಿ ತೆಗೆದುಕೊಳ್ಳುತ್ತಾರೆ. ಆದರೆ ಸರ್ಕಾರಿ ಆಸ್ಪತ್ರೆಗಳಿಗೆ ಬಂದರೆ 15 ಸಾವಿರ ವೇತನ ತೆಗೆದುಕೊಳ್ಳುತ್ತಾರೆ, ಮತ್ತು round the clock ಅವರು ಕೆಲಸ ಮಾಡಬೇಕಾಗುತ್ತದೆ. ಈ ಎಲ್ಲಾ ವಿಷಯಗಳನ್ನು ಕೂಡ ನಾವು ಕಮಿಟಿಯಲ್ಲಿ decision ತೆಗೆದುಕೊಳ್ಳಬೇಕೆಂದು ಹೇಳಿ ಕಮಿಟಿಯನ್ನು ರಚನೆ ಮಾಡಿದ್ದೇವೆ. ಆ ಕಮಿಟಿಯಲ್ಲಿ ಎಲ್ಲಾ ವಿಷಯಗಳನ್ನು ತೆಗೆದುಕೊಂಡು ಆದಷ್ಟುಬೇಗ ಮಾಡಬೇಕೆಂದು ಮಾಡಿದ್ದು, ಈ ರಾಜ್ಯದಲ್ಲಿ 8ರಿಂದ 15 ಮಂದಿ ಡಾಕ್ಟರುಗಳನ್ನು ಎಲ್ಲೆಲ್ಲಿ ಖಾಲಿ ಇದೆ ಅಲ್ಲಿ ಭರ್ತಿ ಮಾಡುತ್ತಿದ್ದೇವೆ. ಆ ರೀತಿ ಭರ್ತಿ ಮಾಡುವಂತಹ ಸಂದರ್ಭದಲ್ಲಿ ಸಂಪೂರ್ಣವಾಗಿ ಎಲ್ಲ

ಜವಾಬ್ದಾರಿಯನ್ನು ತೆಗೆದುಕೊಂಡು, ವೇತನವನ್ನು ಯಾವರೀತಿ ಜಾಸ್ತಿ ಮಾಡಬೇಕು, ಏನೇನು ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ನೋಡಿ ಆದಷ್ಟು ಬೇಗ ವಿಷಯವನ್ನು ಸದನದ ಗಮನಕ್ಕೆ ತರುವಂತಹ ಕೆಲಸವನ್ನು ಮಾಡುತ್ತೇನೆ.

(ಖಖ) ವಿಷಯ: <u>ಹರಿಹರದ ಹತ್ತಿರ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಮಾಡಲು ಟೆಂಡರ್ ಕರೆದಿದ್ದು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಿಲ್ಲದಿರುವುದರ ಬಗ್ಗೆ</u> :-

ಶ್ರೀ ಬಿ.ಪಿ. ಹರೀಶ್(ಹರಿಹರ) :- ಸನ್ಮಾನ್ಯ ಸಭಾಧ್ಯಕ್ಷರೇ, ಹರಿಹರದ ಹತ್ತಿರ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಮಾಡಲು ಟೆಂಡರ್ ಕರೆದಿದ್ದು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಿಲ್ಲದಿರುವುದರ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಶೋಭಾ ಕರಂದ್ಲಾಜೆ (ಲೋಕೋಪಯೋಗಿ ಸಚಿವರ ಪರವಾ) :- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಾವಣಗೆರೆ ಜಿಲ್ಲೆ ಹರಿಹರದ ಹತ್ತಿರ ಕಿ.ಮೀ 278.30 ರಲ್ಲಿ ತುಂಗಭದ್ರ ನದಿಗೆ ಸೇತುವೆ ನಿರ್ಮಾಣ ಕೆಲಸವು 3 ನೇ ಹಂತದ ಸೇತುವೆ ಪಟ್ಟಿಯಲ್ಲಿ ರೂ. 600.00 ಲಕ್ಷಗಳಿಗೆ ಮಂಜೂರಾಗಿದ್ದು, ಈ ಕಾಮಗಾರಿಯನ್ನು ಮೂರನೇ ಹಂತದ ಸೇತುವೆಯ ಪ್ಯಾಕೇಜು-3 ರಲ್ಲಿ ತೆಗೆದುಕೊಂಡಿದೆ. ಈ ಕಾಮಗಾರಿಯನ್ನು ಮೆ|| ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂ. ಲಿಮಿಟೆಡ್ ಇವರಿಗೆ ಸೆಪ್ಟೆಂಬರ್ 2006 ರಲ್ಲಿ ವಹಿಸಲಾಗಿರುತ್ತದೆ. ಗುತ್ತಿಗೆದಾರರು ಸರ್ವೆ, ಮಣ್ಣಿನ ಪರೀಕ್ಷೆ, ವಿನ್ಯಾಸ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿದಾಗ ಈ ಕಾಮಗಾರಿಗೆ ಒಟ್ಟು ರೂ. 2480 ಲಕ್ಷ ರೂ.ಗಳು ಬೇಕಾಗಿರುತ್ತದೆ. ಸದರಿ ಸೇತುವೆಗೆ ಸರ್ಕಾರದ ಆದೇಶದಲ್ಲಿ ನಮೂದಿಸಿದ ಮೊತ್ತದ ಬದಲಿಗೆ ರೂ. 2480 ಲಕ್ಷಗಳು ಬೇಕಿರುತ್ತದೆ. ಆದ್ದರಿಂದ, ಸದರಿ ಸೇತುವೆಗೆ ಹೆಚ್ಚುವರಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದ್ದು ಈ ಬಗ್ಗೆ ಆರ್ಥಿಕ ಇಲಾಖೆಯೊದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ವರ್ಷದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.